ಕರ್ನಾಟಕ ಸರ್ಕಾರ
ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ನಿರ್ದೇಶನಾಲಯ
ನಿರ್ದೇಶಕರ ಕಛೇರಿ, ನೆಲಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ.ಅಂಬೇಡ್ಕರ್ ವೀಧಿ, ಬೆಂಗಳೂರು-560001
ದೂ.ಸಂ.080-22860907 ಫ್ಯಾಕ್ಸ್:080-22868347 ಇ-ಮೇಲ್ ವಿಳಾಸ: dir-dwdsc-ka@nic.in/dirdwdscka@gmail.com

ಸಂಖ್ಯೆ:ವಿಹಿನಿ/ವಿ.ರಾಜ್ಯ.ಪ್ರ/01/2023-24 1885 ದಿನಾಂಕ: 11 .10.2023

ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು,
ವಿಕಲಚೇತನರ ಹಾಗೂ ಹಿರಿಯ ನಾಗರಿಕರ
ಸಬಲೀಕರಣ ಇಲಾಖೆ
ಎಲ್ಲಾ 31 ಜಿಲ್ಲೆ.

ಮಾನ್ಯರೆ,

ವಿಷಯ: ವಿಕಲಚೇತನರ ಕಲ್ಯಾಣ ಕ್ಷೇತ್ರದಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದ/ಸಲ್ಲಿಸುತ್ತಿರುವ ವ್ಯಕ್ತಿ, ಸಂಸ್ಥೆ ಮತ್ತು ವಿಶೇಷ ಶಿಕ್ಷಕರಿಗೆ ರಾಜ್ಯ ಪ್ರಶಸ್ತಿಯನ್ನು ನೀಡುವುದಕ್ಕೆ ಸಂಬಂಧಿಸಿದಂತೆ ಜಿಲ್ಲಾ ಮಟ್ಟದಲ್ಲಿ ಅರ್ಜಿಗಳನ್ನು ಪಡೆಯಲು ನಿಗದಿಪಡಿಸಿದ ದಿನಾಂಕದ ಬಗ್ಗೆ.

*********

ವಿಷಯಕ್ಕೆ ಸಂಬಂಧಿಸಿದಂತೆ ವಿಶ್ವ ಸಂಸ್ಥೆಯ ನಿರ್ದೇಶನಾನುಸಾರ ಪ್ರತಿ ವರ್ಷ ಡಿಸೆಂಬರ್ 3ರಂದು **"ವಿಶ್ವ ವಿಕಲಚೇತನರ ದಿನಾಚರಣೆಯ"** ಆಚರಿಸಲಾಗುತ್ತದೆ. ಆ ಸಂದರ್ಭದಲ್ಲಿ ಸರ್ಕಾರದ ವತಿಯಿಂದ ವಿಕಲಚೇತನರ ಕ್ಷೇತ್ರದಲ್ಲಿ ಸಾಧನೆಗೈದ ವ್ಯಕ್ತಿ, ಸಂಸ್ಥೆ ಮತ್ತು ವಿಶೇಷ ಶಾಲೆಗಳಲ್ಲಿ 15 ವರ್ಷಗಳಿಗೂ ಮೇಲ್ಪಟ್ಟ ಸೇವೆ ಸಲ್ಲಿಸುತ್ತಿರುವ/ ಸಲ್ಲಿಸಿರುವ ವಿಶೇಷ ಶಿಕ್ಷಕರಿಗೆ ಪ್ರತಿ ವರ್ಷವೂ ರಾಜ್ಯ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗುತ್ತದೆ. ಆ ಹಿನ್ನಲೆಯಲ್ಲಿ 2023ನೇ ಸಾಲಿನಲ್ಲೂ ಸಹ ಪ್ರಶಸ್ತಿಗಳನ್ನು ನೀಡಲು ಅರ್ಜಿಗಳನ್ನು ಕರೆಯಲಾಗಿದೆ ತಾವುಗಳು ತಮ್ಮ ಜಿಲ್ಲೆಯಲ್ಲಿ ವಿಕಲಚೇತನರ ಕ್ಷೇತ್ರದಲ್ಲಿ ಉತ್ತಮ ಸೇವೆ ಸಲ್ಲಿಸುತ್ತಿರುವ ವ್ಯಕ್ತಿ/ಸಂಸ್ಥೆ ಮತ್ತು ಶಿಕ್ಷಕರುಗಳು ಪ್ರಶಸ್ತಿಗಾಗಿ ಅರ್ಜಿ ಸಲ್ಲಿಸಲು ಅನುವಾಗುವಂತೆ ಜಿಲ್ಲಾ ಮಟ್ಟದಲ್ಲಿ ವ್ಯಾಪಕ ಪ್ರಚಾರವನ್ನು ನೀಡಿ ಪ್ರಶಸ್ತಿ ಅರ್ಜಿಗಳನ್ನು ಈ ಕೆಳಕಂಡ ದಾಖಲೆಗಳೊಂದಿಗೆ ದಿನಾಂಕ:25.10.2023ರೊಳಗೆ ಜಿಲ್ಲಾ ಕಛೇರಿಗೆ ಪಡೆಯಲು ತಿಳಿಸಿದೆ.

ಹೀಗೆ ಸ್ವೀಕೃತ ಅರ್ಜಿಗಳನ್ನು ಕ್ರೋಢೀಕರಿಸಿ, ಖುದ್ದಾಗಿ ದಾಖಲೆಗಳನ್ನು ಪರಿಶೀಲಿಸುವುದರ ಜೊತೆಗೆ ತಮ್ಮಲ್ಲಿಯೇ ರಾಜ್ಯ ಪ್ರಶಸ್ತಿ ಆಯ್ಕೆ ಸಮಿತಿಯನ್ನು ಮಾಡಿಕೊಂಡು, ಅದರಲ್ಲಿ ರಾಜ್ಯ ಪ್ರಶಸ್ತಿ ಕೋರಿ ಬಂದ ವಿವಿಧ ವಿಭಾಗಗಳ ಅರ್ಜಿಗಳನ್ನು ಮಂಡಿಸಿ, ಪ್ರತಿ ವಿಭಾಗದಲ್ಲಿ 1:3 ಅನುಪಾತದಂತೆ ಆಯ್ಕೆ ಮಾಡುವುದು. ಆಯ್ಕೆಯಾದ ಅರ್ಜಿಗಳನ್ನು ಮತ್ತು ದಾಖಲೆಗಳನ್ನು ಗಣಕೀಕರಣಗೊಳಿಸಿ, ಸಾಫ್ಟ್‌ಕಾಫಿ ಮತ್ತು ಹಾರ್ಡ್‌ಕಾಫಿಗಳನ್ನು ಈ ಕೆಳಕಂಡ ದಾಖಲೆಗಳೊಂದಿಗೆ ನಿರ್ದೇಶನಾಲಯಕ್ಕೆ ಸಲ್ಲಿಸುವುದು.

1. ರಾಜ್ಯ ಪ್ರಶಸ್ತಿ ಆಯ್ಕೆ ಸಮಿತಿಯ ಸಭಾ ನಡವಳಿ,
2. ಕ್ರೂಢೀಕೃತ ಹಾರ್ಡ್ ಮತ್ತು ಸಾಫ್ಟ್ ಪ್ರತಿಗಳು ಸಲ್ಲಿಸುವುದು.
3. ಅರ್ಜಿನಮೂನೆಯಲ್ಲಿ ಅರ್ಜಿದಾರರು ಜಿಲ್ಲೆ, ರಾಜ್ಯ, ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಮಾಡಿದ ಸಾಧನೆಗಳ ಬಗ್ಗೆ ಲಗತ್ತಿಸಿದ ಪ್ರಮಾಣ ಪತ್ರಗಳನ್ನು ಕ್ರಮ ಸಂಖ್ಯೆಯೊಂದಿಗೆ ನಮೂದಿಸುವುದು.
4. ವಿಕಲಚೇತನರ ಗುರುತಿನ ಚೀಟಿ ಪ್ರತಿಯನ್ನು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ದೃಢೀಕರಿಸುವುದು.
5. ಅರ್ಜಿ ನಮೂನೆಯಲ್ಲಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳರವರು ಶಿಫಾರಸ್ಸು ನೀಡಿ ಸಹಿ ಮತ್ತು ಮೊಹರ್‌ನ್ನು ಕಡ್ಡಾಯವಾಗಿ ನಮೂದಿಸುವುದು.
6. ಕೇವಲ ಹಾಳೆಗಳ ರೂಪದಲ್ಲಿ ಕಳುಹಿಸದೆ ಅದಕ್ಕೆ ಕವರ್ ಪತ್ರ **(Covering Letter)** ದೊಂದಿಗೆ ಅರ್ಜಿದಾರರ ಭಾವಚಿತ್ರ ಹಾಗೂ ಬ್ಯಾಂಕ್ ಖಾತೆಯ ವಿವರದ ಪ್ರತಿಯನ್ನು ಲಗತ್ತಿಸಿ ಸಲ್ಲಿಸುವುದು.
7. ಎಲ್ಲಾ ಕ್ಷೇತ್ರಗಳಿಂದಲೂ ಪ್ರಶಸ್ತಿಗೆ ಅರ್ಜಿಗಳನ್ನು ಪಡೆದು ಸಲ್ಲಿಸುವುದು.

ಪು..2

ಮುಂದುವರೆದು ಅರ್ಜಿದಾರರು ಈ ಹಿಂದೆ ರಾಜ್ಯ ಪ್ರಶಸ್ತಿಯನ್ನು ಪಡೆದಿರುವರೆ ಎಂಬ ಬಗ್ಗೆಯೂ ಪರಿಶೀಲನೆ ಮಾಡಿ ಪ್ರತಿಯೊಂದು ಅರ್ಜಿಗಳ ಬಗ್ಗೆ ಅರ್ಜಿದಾರರು ಪ್ರಶಸ್ತಿಗೆ ಅರ್ಹರೇ ಅಥವಾ ಇಲ್ಲವೇ ಎಂಬುದನ್ನು ಸ್ಪಷ್ಟ ಅಭಿಪ್ರಾಯದೊಂದಿಗೆ ದಿನಾಂಕ:31.10.2023ರೊಳಗೆ **ನಿಗದಿತ ನಮೂನೆಯಲ್ಲಿ** ಪ್ರಧಾನ ಕಛೇರಿಗೆ ಸಲ್ಲಿಸಲು ಸೂಚಿಸಿದೆ. ನಿಗದಿತ ಅವಧಿಯೊಳಗೆ ಸಲ್ಲಿಸದ ಮತ್ತು ಮೇಲ್ಕಂಡ ಅಂಶಗಳನ್ನೊಳಗೊಳ್ಳದ ಅಥವಾ ತಡವಾಗಿ ಕಳುಹಿಸಲಾದ ಪ್ರಸ್ತಾವನೆಗಳನ್ನು ಮಾನ್ಯ ಮಾಡುವುದಿಲ್ಲ ಹಾಗೂ ತಡವಾಗಿ ಕಳುಹಿಸಿದ ಪ್ರಸ್ತಾವನೆಗಳ ಆಗುಹೋಗುಗಳಿಗೆ ತಮ್ಮನ್ನೇ ನೇರ ಜವಾಬ್ದಾರರನ್ನಾಗಿ ಮಾಡಲಾಗುವುದು. ಅರ್ಜಿಯ ನಿಗದಿತ ನಮೂನೆಗಳನ್ನು ಇಲಾಖೆಯ ವೆಬ್-ಸೈಟ್ (https://dwdsc.karnataka.gov.in) ನಲ್ಲಿ ಪಡೆಯಬಹುದಾಗಿದೆ.

ತಮ್ಮ ವಿಶ್ವಾಸಿ,

ಲಗತ್ತು: ಕ್ರೋಢೀಕೃತ ನಮೂನೆಗಳು.

11/10

ನಿರ್ದೇಶಕರು,
ವಿಕಲಚೇತನರ ಮತ್ತು ಹಿರಿಯ ನಾಗರಿಕರ
for ಸಬಲೀಕರಣ ಇಲಾಖೆ,
ಬೆಂಗಳೂರು.

2023–24ನೇ ಸಾಲಿನ ವಿಶೇಷ ಶಿಕ್ಷಕರಿಗೆ ನೀಡುವ ಪ್ರಶಸ್ತಿಗಾಗಿ ಸಲ್ಲಿಸಿರುವ ಅರ್ಜಿಗಳ ವಿವರ

| ಕ್ರ.ಸಂ | ಹೆಸರು ಮತ್ತು ವಿಳಾಸ | ವಯಸ್ಸು | ಪುರುಷ / ಮಹಿಳೆ | ವಿದ್ಯಾರ್ಹತೆ | ವಿಶೇಷ ಶಿಕ್ಷಣ / ತರಬೇತಿ | ಸೇವೆಗೆ ಸೇರಿದ ದಿನಾಂಕ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಹೊಂದಿರುವ ತರಬೇತಿ | ವಿಶೇಷ ಶಿಕ್ಷಣ ಕ್ಷೇತ್ರದಲ್ಲಿ ಅನುಭವ ಹಾಗೂ ಸಾಧನೆ (ವಿವರಗಳೊಂದಿಗೆ) | ಶಿಕ್ಷಕರ ಸಮಾಜದ ಗೌರವ ಆಧಾರದಲ್ಲಿ ಪಾತ್ರ | ಶಿಕ್ಷಕರು ಲಭ್ಯವಿರುವ ಪೀಠೋಪಕರಣಗಳಿಂದ ಮಕ್ಕಳಲ್ಲಿ ಕಲಿಕಾ ಸಾಮರ್ಥ್ಯವನ್ನು ಗುರುತಿಸಿರಬೇಕು | ತಮ್ಮ ಜ್ಞಾನ ವೃದ್ಧಿಯಿಂದ ಸಮಾಜದ ಉಪಯೋಗಕ್ಕಾಗಿ ಪುಸ್ತಕ / ಲೇಖನಗಳನ್ನು ಪ್ರಕಟಿಸಬೇಕು ಹಾಗೂ ಸಂಶೋಧನೆಯಲ್ಲಿ ತೊಡಗಿರುವವರಿಗೆ ಸಲಹೆ ಹಾಗೂ ಮಾರ್ಗದರ್ಶನವನ್ನು ನೀಡಿರಬೇಕು | ಷರಾ |
|---|---|---|---|---|---|---|---|---|---|---|---|
| | 1 | 2 | 3 | 4 | 5 | 6 | 7 | 8 | 9 | 10 | 11 |
| 1 | | | | | | | | | | | |

2023–24ನೇ ಸಾಲಿನಲ್ಲಿ ವಿಕಲಚೇತನ ಕ್ಷೇತ್ರದಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದ ಸಂಸ್ಥೆಗಳಿಗೆ ನೀಡುವ ಪ್ರಶಸ್ತಿಗಾಗಿ ಸಲ್ಲಿಸಿರುವ ಅರ್ಜಿಗಳ ವಿವರ

| ಕ್ರ.ಸಂ | ಸಂಸ್ಥೆಯ ಹೆಸರು ಮತ್ತು ವಿಳಾಸ | ಯಾವ ವರ್ಷಕ್ಕಾಗಿ | ರಾಜ್ಯ ಸರ್ಕಾರ ಅಥವಾ ಸ್ಥಳೀಯ ಸಂಸ್ಥೆಯೊಡನೆ ಇರುವ ಸಂಬಂಧ | ಸಂಸ್ಥೆ ಕೈಗೊಂಡಿರುವ ಕಾರ್ಯ ಸ್ವರೂಪ | ಸಂಸ್ಥೆಯಲ್ಲಿರುವ ಒಟ್ಟು ಸಂಖ್ಯೆ (ಅಂಗವಿಕಲರ ಪುರುಷ ಮಹಿಳಾ ನೌಕರರು ಎಷ್ಟು ಇದ್ದಾರೆ ಎಂಬುದನ್ನು ನಮೂದಿಸಿ | ಸಂಸ್ಥೆ ಇದುವರೆಗೆ ಮಾಡಿರುವ ಕೆಲಸ ಕಾರ್ಯಗಳ ವಿವರ ಯಾವ ಸ್ಥಳಗಳಲ್ಲಿ ಮತ್ತು ಎಷ್ಟು ಜನ ಅಂಗವಿಕಲರಿಗೆ ನೆರವಾಗಿದೆಯೆಂಬ ವಿವರಗಳನ್ನು ನೀಡಿ | ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರರಿಂದ ಸಂಸ್ಥೆಯು ಅನುದಾನ ಪಡೆಯುತ್ತಿದೆಯೇ.? ಪಡೆಯುತ್ತಿದ್ದರೆ ಅನುದಾನದ ವಿವರ ತಿಳಿಸಿ | ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದದ ಅಧಿಕಾರಿಗಳು ಅಲ್ಲವೇ ಇತರೆ ಯಾರೇ ಅಧಿಕಾರಿಗಳು ಹಿಂದೆ ಸಂಸ್ಥೆಗೆ ಬೇಟಿ ನೀಡಿದ್ದಾರೆಯೇ.? ಅಭಿಪ್ರಾಯಗಳ ವಿವರ ನೀಡಿ | ವಿವರವಾದ ಷರಾ |
|---|---|---|---|---|---|---|---|---|---|
| | 1 | 2 | 3 | 5 | 6 | 7 | 8 | 9 | 10 |
| | | | | | | | | | |

ವಿಕಲಚೇತನರ ದಿನಾಚರಣೆ – 2023–24

ವೈಯಕ್ತಿಕ ವಿಭಾಗಲ್ಲಿ ನೀಡುವ ಪ್ರಶಸ್ತಿಗಾಗಿ ಸಿಲ್ಲಿಸಿರುವ ಅರ್ಜಿಗಳ ವಿವರ

| ಕ್ರ.ಸಂ | ಹೆಸರು ಮತ್ತು ವಿಳಾಸ, ಮೊಬೈಲ್ ಸಂಖ್ಯೆ / ಇ–ಮೇಲ್ ವಿಳಾಸ | ಹುಟ್ಟಿದ ದಿನಾಂಕ ವಯಸ್ಸು | ಪುರುಷ / ಮಹಿಳೆ | ವಿಕಲಚೇತನರಾಗಿದ್ದಲ್ಲಿ ವಿಕಲಚೇತನತೆಯ ಸ್ವರೂಪ ಹಾಗೂ ವಿಕಲಚೇತನತೆಯ ಪ್ರಮಾಣ | ವ್ಯಕ್ತಿ ಕಾರ್ಯ ನಿರ್ವಹಿಸುತ್ತಿರುವ ಸಂಸ್ಥೆಯ ಹೆಸರು, ಕಾರ್ಯ ಕ್ಷೇತ್ರ ವಿವರ | ವ್ಯಕ್ತಿಯ ಸಂಕ್ಷಿಪ್ತ ಜೀವನ ಚರಿತ್ರೆಯನ್ನೊಳಗೊಂಡ ಪರಿಚಯ | ವಿಕಲಚೇತನ ಕ್ಷೇತ್ರದಲ್ಲಿ ಅವರ ಪುರ್ನಸತಿಗಾಗಿ ನಿರ್ವಹಿಸುತ್ತಿರುವ ಕೆಲಸಗಳು / ಕಾರ್ಯಕ್ಷೇತ್ರ | ಷರಾ ಶಫಾರಸ್ಸು ಮಾಡಿರುವವರ ವಿವರ |
|---|---|---|---|---|---|---|---|---|
| | 1 | 2 | 3 | 4 | 5 | 6 | 7 | 8 |
| | | | | | | | | |

# <u>ಅನುಬಂಧ-ಎ</u>

# ಸಂಸ್ಥೆಗಳಿಗೆ  ನೀಡುವ ಪ್ರಶಸ್ತಿಗೆ ಅರ್ಜಿ ನಮೂನೆ

| | | |
|---|---|---|
| 1 | ಸಂಸ್ಥೆಯ ಹೆಸರು ಅಂಚೆ ಮತ್ತು ತಂತಿ ವಿಳಾಸ | |
| 2 | ಯಾವ ವರ್ಷಕ್ಕಾಗಿ | |
| 3 | ರಾಜ್ಯ ಸರ್ಕಾರ ಅಥವಾ ಸ್ಥಳೀಯ ಸಂಸ್ಥೆಯೊಡನೆ ಇರುವ ಸಂಬಂಧ | |
| 4 | ಸಂಸ್ಥೆ ಕೈಗೊಂಡಿರುವ ಕಾರ್ಯ ಸ್ವರೂಪ | |
| 5 | ಸಂಸ್ಥೆಯಲ್ಲಿರುವ ನೌಕರರ ಒಟ್ಟು ಸಂಖ್ಯೆ (ಅಂಗವಿಕಲರ ಪುರುಷ ಮಹಿಳಾ ನೌಕರರು ಎಷ್ಟು ಇದ್ದಾರೆ ಎಂಬುದನ್ನು ನಮೂದಿಸಿ) | |
| 6 | ಸಂಸ್ಥೆ ಇದುವರೆಗೆ ಮಾಡಿರುವ ಕೆಲಸ ಕಾರ್ಯಗಳ ವಿವರ ಯಾವ ಸ್ಥಳಗಳಲ್ಲಿ ಮತ್ತು ಎಷ್ಟು ಜನ ಅಂಗವಿಕಲರಿಗೆ ನೆರವಾಗಿದೆ ಎಂಬ ವಿವರಗಳನ್ನು ನೀಡಿ | |
| 7 | ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದಿಂದ ಸಂಸ್ಥೆಯು ಅನುದಾನ ಪಡೆಯುತ್ತಿದೆಯೆ? ಪಡೆಯುತ್ತಿದ್ದರೆ ಅನುದಾನದ ವಿವರ ತಿಳಿಸಿ | |
| 8 | ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ಅಧಿಕಾರಿಗಳು ಇಲ್ಲವೇ ಇತರೆ ಯಾರೇ ಅಧಿಕಾರಿಗಳು ಹಿಂದೆ ಸಂಸ್ಥೆಗೆ ಭೇಟಿ ನೀಡಿದ್ದಾರೆಯೇ ? ಅಭಿಪ್ರಾಯಗಳ ವಿವರ ನೀಡಿ | |
| 9 | ವಿವರವಾದ ಷರಾ | |

**ಹೆಸರು, ಪದನಾಮ**

## <u>ಅನುಬಂಧ-ಬಿ</u>

## ವ್ಯಕ್ತಿಗಳಿಗೆ ನೀಡುವ ಪ್ರಶಸ್ತಿಗೆ ಅರ್ಜಿ ನಮೂನೆ

| | | |
|---|---|---|
| 1 | ಹೆಸರು ಮತ್ತು ಅಂಚೆ ವಿಳಾಸ | |
| 2 | ವಯಸ್ಸು | |
| 3 | ಪುರುಷ / ಮಹಿಳೆ | |
| 4 | ವ್ಯಕ್ತಿ ಸಂಬಂಧ ಹೊಂದಿರುವ ಸಂಸ್ಥೆಯ ಹೆಸರು ಸ್ಥಳೀಯ ಮತ್ತು ಕ್ಷೇತ್ರ ಕಾರ್ಯವಿವರ ಹಾಗೂ ಎಷ್ಟು ಜನ ಎಂಬುದನ್ನು ತಿಳಿಸಿ. | |
| 5 | ವ್ಯಕ್ತಿಯ ಕಾರ್ಯವಿಶಿಷ್ಟ ಎಂದು ಹೇಗೆ ಪರಿಗಣಿಸಲಾಯಿತು | |
| 6 | ವ್ಯಕ್ತಿಯ ಸಂಕ್ಷಿಪ್ತ ಜೀವನ ಚರಿತ್ರೆಯನ್ನೊಳಗೊಂಡ ಪರಿಚಯ | |

**ಹೆಸರು, ಪದನಾಮ**

*<u>ಅನುಬಂಧ-ಸಿ</u>*

## ವಿಶೇಷ ಶಿಕ್ಷಕರ ಪ್ರಶಸ್ತಿಗಾಗಿ ಸಲ್ಲಿಸುವ ಅರ್ಜಿಯ ನಮೂನೆ

| | | |
|---|---|---|
| 1 | ಹೆಸರು ಮತ್ತು ಅಂಚೆ ವಿಳಾಸ | |
| 2 | ಪುರುಷ / ಮಹಿಳೆ | |
| 3 | ವಿದ್ಯಾರ್ಹತೆ | |
| 4 | ವಿಶೇಷ ಶಿಕ್ಷಣ | |
| 5 | ಶಿಕ್ಷಣ ಕ್ಷೇತ್ರದಲ್ಲಿ ಹೊಂದಿರುವ ತರಬೇತಿ | |
| 6 | ವಿಶೇಷ ಶಿಕ್ಷಣ ಕ್ಷೇತ್ರದಲ್ಲಿ ಅನುಭವ ಹಾಗೂ ಸಾಧನೆ ವಿವರಗಳೊಂದಿಗೆ | |
| 7 | ಅಂಗವಿಕಲ ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗೆ ವಹಿಸಿದ ಪರಿಶ್ರಮ / ಪ್ರಕಟಿಸಿದ ಪುಸ್ತಕಗಳು/ ತಯಾರಿಸಿದ ಕಲಿಕೆ ಸಾಮಗ್ರಿಗಳು / ಇತರೆ ವಿಷಯಗಳ ಬಗ್ಗೆ ಸಾಧನೆ ಇವುಗಳ ಬಗ್ಗೆ ದಾಖಲಾತಿಗಳನ್ನು ಒದಗಿಸುವುದು | |
| 8 | ಅಂಗವಿಕಲರ ವಿದ್ಯಾಭ್ಯಾಸ / ಪುನರ್ವಸತಿ ಸರ್ವತೋಮುಖ ಅಭಿವೃದ್ಧಿಗಾಗಿ ಹೊಸ ಪ್ರಯೋಗಗಳ ಬಗ್ಗೆ ವಿಶೇಷ ಮಾಹಿತಿ ಇದ್ದಲ್ಲಿ ದಾಖಲಾತಿಗಳೊಂದಿಗೆ ಒದಗಿಸುವುದು. | |
| 9 | ತಮ್ಮ ಜ್ಞಾನ ವೃದ್ಧಿಯಿಂದ ಸಮಾಜದ ಉಪಯೋಗಕ್ಕಾಗಿ ಪ್ರಕಟಿಸಿದ ಪುಸ್ತಕ / ಲೇಖನಗಳನ್ನು ಪ್ರಕಟಿಸುವ ಬಗ್ಗೆ ಸಂಶೋಧನೆಯಲ್ಲಿ ತೊಡಗಿರುವವರಿಗೆ ಸಲಹೆ ಉದ್ಯೋಗವಕಾಶಗಳನ್ನು ಒದಗಿಸುವ ಬಗ್ಗೆ ಮಾರ್ಗದರ್ಶನ ನೀಡಿದ ವಿವರ | |
| 10 | ಷರಾ ಇತರೆ ಯಾವುದಾದರೂ ಹೆಚ್ಚಿನ ಮಾಹಿತಿ ಇದ್ದಲ್ಲಿ | |

**ಹೆಸರು, ಪದನಾಮ**